ಸಿ.ಸಿ. ನಂ.**818/2023**

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹೊಸನಗರ .

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಚಂದ್ರಪ್ರಸಾದ್ | ಪಿ.ಡಬ್ಲ್ಯೂ- **1** |
| ತಂದೆಯ ಹೆಸರು | ಃ | ಸತ್ಯನಾರಾಯಣ | ಸಿ.ಡಬ್ಲ್ಯೂ- **1** |
| ವಯಸ್ಸು | ಃ | **50** ವರ್ಷ | ಪ್ರಾಮಾಣೀಕರಿಸಿದ |
| ಉದ್ಯೋಗ | ಃ | ಸಿವಿಲ್ ಇಂಜಿನಿಯರ್ | ದಿಃ **20/08/2024** |
| ವಾಸ | ಃ | ಬೆಂಗಳೂರು. | |

ಮುಖ್ಯ ವಿಚಾರಣೆಃ-ಮಾನ್ಯ ಸ.ಸ.ಅ. ರವರಿಂದಃ-

ಚಾ.ಸಾ.**-2** ನನ್ನ ಹೆಂಡತಿ **,** ಚಾ.ಸಾ.**-3** ನನ್ನ ಅಣ್ಣ. ಆರೋಪಿ ನನ್ನ ದೊಡ್ಡಮ್ಮನ ಮಗ. ದಿನಾಂಕ **19-06-2023** ರಂದು ನಾನು ಬೆಂಗಳೂರಿನಲ್ಲಿದ್ದಾಗ ಬೆಳಿಗ್ಗೆ ಸುಮಾರು **10-30** ಯಿಂದ **11-00** ಗಂಟೆ ಸಮಯದಲ್ಲಿ ಚಾ.ಸಾ.**-2** ರವರು ನನಗೆ ಫೋನ್ ಮಾಡಿ ಬೆನವಳ್ಳಿ ಗ್ರಾಮದ ಸರ್ವೆ ನಂ.**10/6** ರಲ್ಲಿ ನಮ್ಮ ಜಮೀನಿನಲ್ಲಿ ದನಗಳು ಬಂದಿದ್ದು ಎಂದು ನನಗೆ ತಿಳಿಸಿರುತ್ತಾರೆ. ನಂತರ ನಾನು ಚಾ.ಸಾ.**-3** ರವರಿಗೆ ಫೋನ್ ಮಾಡಿದ್ದು ನಂತರ ಚಾ.ಸಾ.**-3** ರವರು ಸ್ಥಳಕ್ಕೆ ಬಂದು ನೋಡಿದ್ದು ದನಗಳು ಒಳಗೆ ಬಂದಿದ್ದು ಆರೋಪಿಯು ಬೇಲಿಗಳನ್ನು ಕಿತ್ತು ಹಾಕಿರುತ್ತಾರೆ ಎಂದು ಜಮೀನಿನಲ್ಲಿರುವ ಅಡಿಕೆ ಸಸಿ**,** ಮಾವಿನ ಸಸಿ**,** ಹಲಸೇ ಸಸಿ ಮತ್ತು ಏಲಕ್ಕಿ ಸಸಿಗಳನ್ನು ದನ ಕಿತ್ತು ತಿಂದುಬಿಟ್ಟಿರುತ್ತದೆ ಮತ್ತು ಅಂದಾಜು ರೂ.**25,000/-** ದಷ್ಟು ಹಾನಿ ಉಂಟಾಗಿರುತ್ತದೆ ಎಂದು ತಿಳಿಸಿರುತ್ತಾರೆ. ನಂತರ ದಿನಾಂಕ **24-06-2023** ರಂದು ನಾನು ಬೆಂಗಳೂರಿನಿಂದ ಊರಿಗೆ ಬಂದಿರುತ್ತೇನೆ. ನಾನು ನಮ್ಮ ಜಾಗದಲ್ಲಿ ಆರೋಪಿಯನ್ನು ಕೇಳಿದ್ದು ಆಗ ಆರೋಪಿಯು ನನಗೆ ಸೂಳೇ ಮುಂಡೆ**,** ಬೋಳಿ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು ನನ್ನನ್ನು ಕೊಲೆ ಮಾಡುತ್ತೇನೆ ಎಂದು ಬೆದರಿಕೆ

ಹಾಕಿರುತ್ತಾರೆ. ಈ ಸಂಬಂಧ ನಾನು ರಿಪ್ಪನ್ ಪೇಟೆ ಪೋಲೀಸ್ ಠಾಣೆಯಲ್ಲಿ ದಿನಾಂಕ 26-06-2023 ರಂದು ದೂರು ಕೊಟ್ಟಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ತನ್ನ ಸಹಿಯನ್ನು ಗುರುತಿಸಿದ್ದು ದೂರನ್ನು ನಿ.ಪಿ.-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.-1(ಎ) ಎಂದು ಗುರುತಿಸಲಾಯಿತು. ಈ ಘಟನೆಗೆ ಶ್ರೀದೇವಿ ಬಿನ್ ಜೈಶೀಲ ರವರ ಕುಮಕ್ಕು ಇದೆ ಎಂದು ರಿಪ್ಪನ್‌ಪೇಟೆ ಪೋಲೀಸ್ ಠಾಣೆಗೆ ದೂರು ಕೊಟ್ಟಿರುತ್ತೇನೆ.

ನಂತರ ದಿನಾಂಕ 29-06-2023 ರಂದು ಪೋಲೀಸರು ಸ್ಥಳಕ್ಕೆ ಬಂದಾಗ ನಾನು ತೋರಿಸಿದ ಕೃತ್ಯ ನಡೆದ ಸ್ಥಳದಲ್ಲಿ ಪಂಚರಾದ ಚಾ.ಸಾ.-4 ಮತ್ತು 5 ರ ಸಮಕ್ಷಮ ಸಂಜೆ 05-15 ರಿಂದ 06-15 ರ ವರೆಗೆ ಮಹಜರ್ ಕ್ರಮ ಜರುಗಿಸಿ ನಕ್ಷೆ ತಯಾರಿಸಿ ಫೋಟೋಗಳನ್ನು ತೆಗೆಸಿರುತ್ತಾರೆ. ಸಾಕ್ಷಿಯು ಮಹಜರ್ ಮತ್ತು ನಕ್ಷೆಯನ್ನು ನೋಡಿ ತನ್ನ ಸಹಿಗಳನ್ನು ಗುರುತಿಸಿದ್ದು ಮಹಜರ್ ಮತ್ತು ನಕ್ಷೆಯನ್ನು ನಿ.ಪಿ.-2 ಮತ್ತು 3 ಎಂದು ಮತ್ತು ಸಾಕ್ಷಿಯ ಸಹಿಗಳನ್ನು ನಿ.ಪಿ.-2(ಎ) ಮತ್ತು 3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಎರಡು ಭಾವಚಿತ್ರಗಳನ್ನು ನೋಡಿ ಅದರಲ್ಲಿ ತನ್ನ ಇರುವಿಕೆಯನ್ನು ಗುರುತಿಸಿದ್ದು ಸದರಿ ಎರಡು ಭಾವಚಿತ್ರಗಳನ್ನು ನಿ.ಪಿ.-4 ಮತ್ತು 5 ಎಂದು ಗುರುತಿಸಲಾಯಿತು. ನಾನು ಪೋಲೀಸರ ಮುಂದೆ ಮುಂದುವರಿದ ಹೇಳಿಕೆ ಕೊಟ್ಟಿರುವುದಿಲ್ಲ.

(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಅನುಮತಿಯನ್ನು ನೀಡಬೇಕೆಂದು ಮಾನ್ಯ ಸಸಅ ರವರು ಕೋರಿದ್ದು, ಅನುಮತಿ ನೀಡಲಾಯಿತು. )

<u>ಪಾಟೀ ಸವಾಲು:-</u> ಮಾನ್ಯ ಸ.ಸ.ಅ. ರವರಿಂದ

ನಾನು ಘಟನೆಯ ಬಗ್ಗೆ ಕೇಳಲು ಹೋದಾಗ ಆರೋಪಿ ನನ್ನನ್ನು ಅಡ್ಡಗಟ್ಟಿ ನಿಲ್ಲಿಸಿರುತ್ತಾರೆಎಂ ದರೆಸರಿ. ಅದೇ ರೀತಿ ನಮಗೆ ಸೇರಿದ ಜಮೀನಿಗೆ ಆರೋಪಿಯು ಅತೀಕ್ರಮಣ ಪ್ರವೇಶ ಮಾಡಿರುತ್ತಾರೆ ಎಂದರೆ ಸರಿ .

<u>ಪಾಟೀ ಸವಾಲು:-</u> ಆರೋಪಿ ಪರ ಶ್ರೀ ಎ.ಡಿ.ಆರ್. ವಕೀಲರ ಪರವಾಗಿ ಶ್ರೀಮತಿ ಎಸ್.ಎಸ್.ಎಂ. ವಕೀಲರು ಕಾಲಾವಕಾಶ ಕೋರಿದ್ದು ಕೋರಿಕೆಯನ್ನು ತಳ್ಳಿ ಹಾಕಿ ಪಾಟೀಸ ವಾಲು ಇಲ್ಲಾಎಂ ದುತೆಗೆದುಕೊಳ್ಳಲಾಯಿತು.

<u>ಮರು ವಿಚಾರಣೆ:- ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

(ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.